during the last 32 years is 35,364 K. Mts. In addition, Irrigation Department has got 4920 K. Mts. roads in the achakat areas. The road length incharge of TDBs. is 23,426 K. Mts. Forest Department has got 2345 K. Mts. of roads in its charge. The road length in the State per 100 Sq. Mts. of area is 49 out of which surface road is 25 K. Mts. and unsurfaced is 25 K. Mts. ಈ ಅಂಕಿಅಂಶಗಳನ್ನು ನಾವು ನೋಡಿದಾಗ, ರಸ್ತೆಗಳ ಒಂದು ಸಮರ್ಪಕವಾದ ವ್ಯವಸ್ಥೆಯನ್ನು ಮಾಡುವುದರಲ್ಲಿ ಗಣನೀಯವಾಗಿ ಕೆಲಸ ಮಾಡಿದ್ದೇವೆಂಬುದು ಗೊತ್ತಾಗುತ್ತದೆ. The progress achieved under Integrated Comprehensive Rural Communication Programme upto the end of 1977-78 is: New constructions (length taken up to the end of 1977-78)–11,410 K.ms Improvements 8,602 Kmts. Total length completed: New roads 8 526 Kmts., Improvements 6,583 Kmts. ಹಣದ ಮುಗ್ಗಟ್ಟು ಎಷ್ಟೇ ಇದ್ದರೂ ಕೂಡ ಸಮಾಜಕ್ಕೆ ಸಂಬಂಧಪಟ್ಟ ಬೇರೆ ಬೇರೆ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ; ಮಂಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುವುದು, ಜನರಿಗೆ ಜನತಾ ಮನೆಗಳನ್ನು ಕಟ್ಟಿಸಿಕೊಡುವುದು, ನೀರೀಶನಗಳನ್ನು ಒದಗಿಸುವುದು ಇತ್ಯಾದಿ. ಡಿ. ಐ. ಆರ್. ಯೋಜನೆಯಲ್ಲಿ ಹಣದ ವ್ಯವಸ್ಥೆ ಮಾಡಲಿಕ್ಕೆ ಸುಮಾರು ೯೫ ಕೋಟಿ ರೂಪಾಯಿ ಸಾಲದ ವ್ಯವಸ್ಥೆ ಮಾಡಿ ಒಂದು ಲಕ್ಷದ ೮೦ ಸಾವಿರ ಚಿಲ್ಲರೆ ಜನರಿಗೆ ಅದರ ಅನುಕೂಲ ಮಾಡಿಕೊಟ್ಟಿರುವುದಲ್ಲದೆ ನೂರಕ್ಕೆ ೧೦ ರಷ್ಟು ಬಡ್ತಿಯನ್ನು ಸರ್ಕಾರವೇ ಕೊಡಬೇಕಾಗಿದೆ. ಹೀಗೆ ಅನೇಕ ಕೆಲಸಗಳನ್ನು ಮಾಡುವಾಗ ಸರ್ಕಾರ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಗಮನಕೊಟ್ಟು ಕೆಲಸ ಮಾಡಿದೆ ಎಂದರೆ ಈ ಸಭೆಯಾದರೂ ಕೂಡ ಸರ್ಕಾರದ ಪ್ರಗತಿದಾಯಕವಾದ ನೀತಿ ಏನಿದೆ, ಕಾರ್ಯಕ್ರಮ ಏನಿದೆ ಮತ್ತು ಮಾಡಿರತಕ್ಕ ಕೆಲಸ ಏನಿದೆ ಅದನ್ನು ಒಪ್ಪುತ್ತದೆಂದು ನಾನಾದರೂ ಭಾವಿಸುತ್ತೇನೆ. ಇಷ್ಟನ್ನು ಮಾತ್ರ ನಾನು ಪ್ರಸ್ತಾಪ ಮಾಡುತ್ತಾ, ಇನ್ನು ಹೆಚ್ಚಿನ ವಿಚಾರಗಳನ್ನು ಬಹುಮಟ್ಟಿಗೆ ಮುಂದಿನ ಬಡ್ಜೆಟ್ ಅಧಿವೇಶನದ ಸಮಯದಲ್ಲಿ ಏನು ಪ್ರಸ್ತಾಪಿಸಲಾಗುತ್ತದೆ ಆಗ ಹೆಚ್ಚಿನ ವಿವರಗಳನ್ನು ಆಯಾಯಖಾತೆಗೆ ಸಂಬಂಧಪಟ್ಟ ಮಂತ್ರಿಗಳು ಪ್ರಸ್ತಾಪ ಮಾಡುತ್ತಾರೆಂಬ ಮಾತನ್ನು ಹೇಳುತ್ತಾ ಮಾನ್ಯ ಸಭೆಯ ಮುಂದಿರತಕ್ಕ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸುವ ನಿರ್ಣಯಕ್ಕೆ ಅನುಮೋದನೆ ಕೊಡಬೇಕೆಂದು ಕೇಳಿಕೊಂಡು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

MR. SPEAKER.—The amendments to the Governor's Address cannot be put to vote as these are not moved. Now I will put the motion to vote. The question is :

"That we the members of the Karnataka Legislative Assembly assembled in this Session beg leave to Thank the Governor for the Address delivered to the Members of the Ligislature on 18th January, 1979."

The motion was adopted.

Karnataka Municipalities (Amendment) Bill, 1979.

Motion to consider

SRI H. C. SRIKANTAIAH (Minister for Municipal Administration). Sir, I beg to move :

"That the Karnataka Municipalities (Amendment) Bill, 1979 be taken into consideration."

The question was proposed.

ಮಾನ್ಯ ಅಧ್ಯಕ್ಷರೇ, ಈ ಪುರಸಭೆಗಳ ಬಗ್ಗೆ ಕೆಲವು ತಿದ್ದುಪಡಿಗಳನ್ನು ಈ ಆಕ್ಟ್‌ಗೆ ತಂದಿದ್ದೇನೆ. ಆ ಸಂದರ್ಭದಲ್ಲಿ ಅಸೆಂಬ್ಲಿ ಹಾಗೂ ಕೌನ್ಸಿಲ್ ಇಲ್ಲದೇ ಇದ್ದುದರಿಂದ ಇದನ್ನು ಆರ್ಡಿನೆನ್ಸ್ ಮುಖಾಂತರ ಹೊರಡಿಸಿ ಈ ಮನೆಯ ಒಪ್ಪಿಗೆಗೆ ಇಡಲಾಗಿದೆ ಇವರಲ್ಲಿ ತಂದಿರತಕ್ಕಂಥಾ ಕೆಲವು ತಿದ್ದುಪಡಿಗಳು ಯಾವುದೆಂದರೆ ಸೆಕ್ಷನ್ ೧೧ ಆಫ್ ದಿ ಕರ್ನಾಟಕ ಮುನಿಸಿಪಾಲಿಟೀಸ್ ಆಕ್ಟ್‌ಗೆ ಸಂಬಂಧಪಟ್ಟಂತೆ ಇದೆ. ಮೊದಲಿನ ಒಂದು ತಿದ್ದುಪಡಿಯಲ್ಲಿ ಪುರಸಭೆಗಳ ಪಾಪ್ಯುಲೇಷನ್ ಜಾಸ್ತಿಯಾದಂತೆ ಸೀಟುಗಳ ಸಂಖ್ಯೆಯೂ ಸಹ ಜಾಸ್ತಿಯಾಗುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ೧೯೭೧ನೇ ಇಸವಿಯಿಂದಲೂ ಕೂಡ ಸೆನ್ಸಸ್ ಪ್ರಕಾರ ಎಷ್ಟು ಪ್ರಜಾಸಂಖ್ಯೆ ಜಾಸ್ತಿ ಇದ್ದರೂ ಕೂಡ ಪುರಸಭೆಗಳ ವ್ಯಾಪ್ತಿಯಲ್ಲಿ ಬರತಕ್ಕಂಥಾ ಪಟ್ಟಣಗಳಲ್ಲಿ ಆ ಪ್ರಜಾಸಂಖ್ಯೆಗೆ ತಕ್ಕಂತೆ ಸೀಟುಗಳ ಸಂಖ್ಯೆಯನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯ ಇರಲಿಲ್ಲಾ. ಆದುದರಿಂದ ಇದರಲ್ಲಿ ಸೂಚಿಸಿರುವುದು ಏನೆಂದರೆ ೨,೦೦೦ ವರ್ಷವಾದ ಮೇಲೆ ಏನು ಒಂದು ಫಿಗರ್ ಬರುತ್ತಿತ್ತೋ ಅದನ್ನು ೧೯೭೧ನೇ ಇಸವಿಗೆ ಲೆಕ್ಕ ಹಾಕಿಕೊಂಡು ಈ ಸೆನ್ಸಸ್ ಪ್ರಕಾರ ಲೆಕ್ಕಕ್ಕೆ ತೆಗೆದು ಕೊಳ್ಳಬೇಕು ಎಂದು ಈ ಒಂದು ತಿದ್ದುಪಡಿಯಲ್ಲಿ ನಮೂದನೆ ಮಾಡಿದೆ.

ಇನ್ನು ಈ ಬಗ್ಗೆ ಕ್ಯಾಲೆಂಡರ್ ಆಫ್ ಎಲೆಕ್ಟೋರೋಲ್ ಏನು ಇದೆ ಇದನ್ನು ಪುರಸಭೆಯವರು ಮಾಡುವುದಕ್ಕೆ ಅವರಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲದೇ ಇರುವುದರಿಂದ ಹೊಸದಾಗಿ ಎಲೆಕ್ಟೋರೋಲ್ ಮಾಡುವುದಕ್ಕೆ ಸಾಧ್ಯನಿಲ್ಲ. ಆದುದರಿಂದ ಈ ಶಾಸನಸಭೆಗೆ ಆಗಿರತಕ್ಕಂಥಾ ಅಸೆಂಬ್ಲಿ ಎಲೊಕ್ಟೋರೋಲ್ ಎನು ಇದೆ ಅದನ್ನೇ ಈ ಮುನಿಸಿಪಾಲಿಟಿಗಳಿಗೂ ಸಹ ಆಸ್ವೈಯಿಸಬೇಕು ಏನ್ನುವ ಒಂದು ತಿದ್ದುಪಡಿಯನ್ನು ತಂದಿದ್ದೇವೆ.

ಇನ್ನು ಈ ಮುನಿಸಿಪಾಲಿಟೀಸ್ ಟರ್ಮ್ ನಾಲ್ಕು ವರ್ಷದ ಟರ್ಮ್ ಮುಗಿದ ಮೇಲೆ ಈ ಟರ್ಮ್‌ನ್ನು ಎಕ್ಸ್‌ಟೆಂಡ್ ಮಾಡುವುದಕ್ಕೆ ಸಮಾರು ೨೪ ತಿಂಗಳ್ ಕಾಲ ಆಯಿತೆ ೨ ವರ್ಷದವರೆಗೆ ಆದನ್ನು ಮುಂದೂಡ ತಕ್ಕಂಥಾದ್ದರ ಬಗ್ಗೆಯೂ ಸಹ ಒಂದು ತಿದ್ದುಪಡಿಯನ್ನು ಸರ್ಕಾರ ಇದರಲ್ಲಿ ಸೂಚಿಸಿದೆ.

ಇನ್ನು ಇದಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಟೌನ್ ಮುನಿಸಿಪಲ್ ಕೌನ್ಸಿಲ್‌ನ ಮತ್ತು ಸಿಟಿ ಮುನಿಸಿಪಲ್ ಕೌನ್ಸಿಲ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರೇ ಆಗಲಿ ಯಾರಾದರೂ ರಾಜೀನಾಮೆ ಕೊಟ್ಟರೆ ಅವರು ಯಾರಿಗೆ ರಾಜೀನಾಮೆ ಕೊಡಬೇಕು ಎನ್ನ ತಕ್ಕಂಥಾದ್ದನ್ನು ಹಿಂದೆ ನಿಗದಿಯಾಗಿ ಗೊತ್ತಿರಲಿಲ್ಲ. ಅದನ್ನು ಈವಾಗ ನಮೂದು ಮಾಡಿದೆ. ಏನು ನಮೂದು ಮಾಡಿದೆ ಎಂದರೆ ಟೌನ್ ಮುನಿಸಿಪಾಲಿಟಿಗೆ ಸಂಬಂಧಪಟ್ಟಂತೆ ಯಾರೇ ರಾಜೀನಾಮೆ ಕೊಡಲಿ ಅವರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಕೊಡಬೇಕೆಂತಲೂ ಮತ್ತು ಸಿಟಿ ಮುನಿಸಿಪಾಲಿಟಿಗೆ ಸಂಬಂಧಪಟ್ಟಂತೆ ಯಾರೇ ರಾಜೀನಾಮೆ ಕೊಡಲಿ ಅವರು ಡಿವಿಷನಲ್ ಕಮೀಷನರ್‌ಗೆ ಕೊಡಬೇಕೆಂತಲೂ ಈ ಒಂದು ತಿದ್ದುಪಡಿಯಲ್ಲಿ ಸೂಚಿಸಿದ್ದೇವೆ.

ಇನ್ನು ಕೊನೆಯದಾಗಿ ಒಂದು ವಿಷಯ ಏನೆಂದರೆ ಕೆಲವು ಪುರಸಭೆಗಳ ಟರ್ಮ್ ೪ ವರ್ಷ ಇದ್ದಂಥಾ ಸಂದರ್ಭದಲ್ಲಿ ಅಲ್ಲಿನ ಪುರಸಭೆಯಲ್ಲಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಟರ್ಮ್ ಎರಡು ವರ್ಷ ಮುಗಿದ ಮೇಲೆ ಆವರು ಒಂದು ರೆಸಲ್ಯೂಷನ್ ಮಾಡಿದರೆ ಅದು ೪ ವರ್ಷಕ್ಕೆ ಸಂಬಂಧಪಟ್ಟಂತೆ ಇರುತ್ತಿತ್ತು ಮುಂದೆ ಬರತಕ್ಕಂಥಾವರಿಗೂ ಸಹ ಇದು ಸಂಬಂಧಪಡುತ್ತಿತ್ತೆ ಇಲ್ಲವೇ ಏನ್ನುವುದು ಕ್ಲಿಯರ್ ಆಗಿ ಇರಲಿಲ್ಲಾ. ಈಗ ಅದರ ಬಗ್ಗೆ ಕ್ಲಿಯರ್ ಆಗುವ ಹಾಗೆ ಒಂದು ತಿದ್ದುಪಡಿ ತಂದಿದ್ದೇವೆ. ಈ ೩-೪ ತಿದ್ದುಪಡಿಗಳನ್ನು ಆರ್ಡಿನೆನ್ಸ್ ಮುಖಾಂತರ ಹೊರಡಿಸಿದ್ದೇವೆ. ಈ ಮೊತ್ತ ಆ ತಿದ್ದುಪಡಿಗಳಿಗೆ ಈ ಸಭೆ ಒಪ್ಪಿಗೆ ಕೊಡ ಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ

MR. SPEAKER.—The question is :

"That the Karnataka Municipalities (Amendment) Bill, 1979 be taken into consideration."

The motion was adopted.

CLAUSES 2 to 7

MR. SPEAKER.—I will now take up the consideration of the Bill clause by clause.

As there are no amendments I will put clauses 2 to 7 to the vote of the House. The question is ;

"That clauses 2 to 7 both inclusive do stand part of the Bill."

The motion was adopted.

Clauses 2 to 7 were added to the Bill.

CLAUSES 1 ETC.

MR. SPEAKER.—The question is :

"That clause 1, the long title, the Preamble and Enacting Formula do stand part of the Bill."

The motion was adopted.

Clause I, the Long Title, the Preamble and the Enacting Formula were added to the Bill.

MOTION TO PASS

SRI H. C. SRIKANTAIAH.—Sir, I beg to move ;

"That the Karnataka Municipalities (Amendment) Bill, 1979 be passed.

MR. SPEAKER,—The question is :

"That the Karnataka Municipalities (Amendment) Bill, 1979 be passed.

The motion was adopted and the Bill, was passed

KARNATAKA MUNICIPAL CORPORATIONS (AMENDMENT) BILL, 1979

Motion to Consider

SRI H. C. SRIKANTAIAH (Minister for Municipal Administration); Sir, I beg to move :

"That the Karnataka Municipal Corporations (Amendment) Bill 1979 be taken into consideration."

The question was proposed

ಮಾನ್ಯ ಅಧ್ಯಕ್ಷರೇ, ಈ ಒಂದು ಕಾರ್ಪೋರೇಷನ್ನಿನ ವ್ಯಾಪ್ತಿಗೆ ಕೆಲವು ಹಳ್ಳಿಗಳನ್ನು ಚುನಾವಣೆಗೆ ಮುನ್ನ, ಪೇಳಾಪಟ್ಟಿಯನ್ನು ಪಾಕಮಾಡುವುದಕ್ಕೆ ಮುನ್ನ ಸೇರಿಸಲಾಗಿದೆ. ಬೆಂಗಳೂರು ನಗರ ಕಾರ್ಪೋರೇಷನ್ನಿನ ವ್ಯಾಪ್ತಿಯನ್ನು ದೊಡ್ಡದು ಮಾಡುವುದಕೋಸ್ಕರ ಸರ್ಕಾರ ಈ ಬಗೆ ತೀರ್ಮಾನ ಕೈಗೊಂಡಂಥ